ತಿ. ನರಸೀಪುರದ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ

<u>ಸಿಸಿ ಸಂಖ್ಯೆ 287/2015</u>

PW-1

| | | |
|---|---|---|
| ಹೆಸರು | : | ಹೆಚ್.ಜಿ.ರಾಮಸ್ವಾಮಿ |
| ತಂದೆ/ಗಂಡನ ಹೆಸರು | : | ಟಿ.ಗವೀಗೌಡ |
| ವಯಸ್ಸು | : | 56 ವರ್ಷ |
| ವೃತ್ತಿ | : | ಸಹಾಯಕ ಪೊಲೀಸ್ ನಿರೀಕ್ಷಕರು |
| ವಾಸ ಸ್ಥಳ | : | ಡಿ.ಸಿ.ಆರ್.ಬಿ., ಮೈಸೂರು |
| ದಿನಾಂಕ | : | **27-06-2022** |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿದಾರರ ವಿಚಾರಣೆಃ**

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-</u>**

ನಾನು 2018 ರಿಂದ 2022 ರವರೆಗೆ ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಸಹಾಯಕ ಪೊಲೀಸ್ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿಯ 2 ನೇ ಆರೋಪಿತನು ತಲೆಮರೆಸಿಕೊಂಡಿರುತ್ತಾನೆ. ಆತನ ಹಾಜರಾತಿಗಾಗಿ ಉದ್ಘೋಷಣೆ ಮತ್ತು ಜಪ್ತಿ ವಾರೆಂಟನ್ನು ಹೊರಡಿಸಲಾಗಿತ್ತು. ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿತನ ವಿಳಾಸಕ್ಕೆ ಹೋಗಿ ವಿಚಾರಿಸಿದಾಗ ಆರೋಪಿತನ ಸುಳಿವು ಸಿಕ್ಕಿರುವುದಿಲ್ಲ. ಆದ್ದರಿಂದ ದಿನಾಂಕ **10/06/2019** ರಂದು ಆರೋಪಿತನು ಹಿಂದೆ ವಾಸವಾಗಿದ್ದ ಗ್ರಾಮಕ್ಕೆ ಹೋಗಿ ವಿಚಾರಿಸಿದಾಗ ಆರೋಪಿತನ ಸುಳಿವು ಸಿಕ್ಕಿರುವುದಿಲ್ಲ ಮತ್ತು ಆತನು ತಲೆಮರೆಸಿಕೊಂಡಿದ್ದಾನೆ ಎಂದು ತಿಳಿದುಬಂದಿರುತ್ತದೆ. ಆನಂತರ ನಾನು ಗ್ರಾಮದ ವಿವಿಧ ಸ್ಥಳಗಳಲ್ಲಿ ಟಾಮ್ ಟಾಮ್ ಹೊಡೆಯಿಸಿ ಇಸ್ತಿಹಾರ್ ಮಾಡಿರುತ್ತೇನೆ. ನಂತರದಲ್ಲಿ ಗ್ರಾಮದಲ್ಲಿಯ ಹಾಗೂ ಇತರ ಸ್ಥಳಗಳಲ್ಲಿಯ ಜನನಿಬಿಡ ಪ್ರದೇಶಗಳಲ್ಲಿ ಉದ್ಘೋಷಣಾ ಪ್ರತಿಗಳನ್ನು ಲಗತ್ತಿಸಿ ಸ್ಥಳೀಯ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ . ನಾನು ಜರುಗಿಸಿರುವ ಪಂಚನಾಮೆಯನ್ನು

ಈಗ ನೋಡುತ್ತಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಿ ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಪಂಚನಾಮೆಗೆ ಪಂಚರಾದ ಶ್ರೀನಿವಾಸ ಮತ್ತು ರಾಸಿಕ್ ಇವರೂ ಕೂಡ ನನ್ನ ಸಮಕ್ಷಮ ಸಹಿಗಳನ್ನು ಹಾಕಿರುತ್ತಾರೆ. ಅವರುಗಳ ಸಹಿಗಳನ್ನು ನಿ.ಪಿ.1(ಬಿ) ಮತ್ತು 1(ಸಿ) ಎಂದು ಗುರುತಿಸಲಾಯಿತು.

ನಂತರ ಈ ಪ್ರಕರಣದಲ್ಲಿ ಆರೋಪಿತನ ಹಾಜರಾತಿಗಾಗಿ ಮತ್ತೊಮ್ಮೆ ಉದ್ಘೋಷಣೆ ಮತ್ತು ಜಪ್ತಿ ವಾರೆಂಟನ್ನು ಹೊರಡಿಸಲಾಗಿತ್ತು. ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿತನ ವಿಳಾಸಕ್ಕೆ ಹೋಗಿ ವಿಚಾರಿಸಿದಾಗ ಆರೋಪಿತನ ಸುಳಿವು ಸಿಕ್ಕಿರುವುದಿಲ್ಲ. ಆದ್ದರಿಂದ ದಿನಾಂಕ 28/03/2021 ರಂದು ಆರೋಪಿತನು ಹಿಂದೆ ವಾಸವಾಗಿದ್ದ ಗ್ರಾಮಕ್ಕೆ ಹೋಗಿ ವಿಚಾರಿಸಿದಾಗ ಆರೋಪಿತನ ಸುಳಿವು ಸಿಕ್ಕಿರುವುದಿಲ್ಲ ಮತ್ತು ಆತನು ತಲೆಮರೆಸಿಕೊಂಡಿದ್ದಾನೆ ಎಂದು ತಿಳಿದುಬಂದಿರುತ್ತದೆ. ಆನಂತರ ನಾನು ಗ್ರಾಮದ ವಿವಿಧ ಸ್ಥಳಗಳಲ್ಲಿ ಟಾಮ್ ಟಾಮ್ ಹೊಡೆಯಿಸಿ ಇಸ್ತಿಹಾರ್ ಮಾಡಿರುತ್ತೇನೆ. ನಂತರದಲ್ಲಿ ಗ್ರಾಮದಲ್ಲಿಯ ಹಾಗೂ ಇತರ ಸ್ಥಳಗಳಲ್ಲಿಯ ಜನನಿಬಿಡ ಪ್ರದೇಶಗಳಲ್ಲಿ ಉದ್ಘೋಷಣಾ ಪ್ರತಿಗಳನ್ನು ಲಗತ್ತಿಸಿ ಸ್ಥಳೀಯ ಪಂಚರ ಸಮಕ್ಷಮ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ . ನಾನು ಜರುಗಿಸಿರುವ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.2 ಎಂದು ಗುರುತಿಸಿ ಅದರಲ್ಲಿರುವ ನನ್ನ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಪಂಚನಾಮೆಗೆ ಪಂಚರಾದ ರಾಮು ಮತ್ತು ಮಹೇಶ ಇವರೂ ಕೂಡ ನನ್ನ ಸಮಕ್ಷಮ ಸಹಿಗಳನ್ನು ಹಾಕಿರುತ್ತಾರೆ. ಅವರುಗಳ ಸಹಿಗಳನ್ನು ನಿ.ಪಿ.2(ಬಿ) ಮತ್ತು 2(ಸಿ) ಎಂದು ಗುರುತಿಸಲಾಯಿತು.

ಆರೋಪಿತನ ಹಾಜರಾತಿಯನ್ನು ಅಗತ್ಯಪಡಿಸುವ ಕುರಿತು ಜಪ್ತಿ ವಾರೆಂಟನ್ನು ಹೊರಡಿಸಲಾಗಿತ್ತು. ಈ ಬಗ್ಗೆ ಆರೋಪಿತನ ವಿಳಾಸದಲ್ಲಿ ವಿಚಾರಿಸಿದಾಗ ಆತನ ಹೆಸರಿನಲ್ಲಿ ಯಾವುದೇ ಆಸ್ತಿಗಳು ಇಲ್ಲವೆಂದು ತಿಳಿದುಬಂದಿರುತ್ತದೆ. ಅದಲ್ಲದೇ ಹುಣಸೂರು ನಗರಸಭಾ ಕಾರ್ಯಾಲಯ ಇವರು ವರದಿಯೊಂದನ್ನು ನೀಡಿರುತ್ತಾರೆ. ನಗರಸಭೆಯವರು ನೀಡಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ.3 ಎಂದು

ಗುರುತಿಸಲಾಯಿತು. ಆರೋಪಿತನು ಕಡ್ಡಾಯ ನಿವೃತ್ತಿ ಹೊಂದಿರುವ ಬಗ್ಗೆ ಅಧೀಕೃತ ಜ್ಞಾಪನ ಮತ್ತು ಕಛೇರಿ ನಡವಳಿಗಳನ್ನು ಸ್ವೀಕರಿಸಿದ್ದು ಅವುಗಳನ್ನು ನಿ.ಪಿ.**4** ಮತ್ತು **5** ಎಂದು ಗುರುತಿಸಲಾಯಿತು. ನಾನು ಪುರಸಭೆ ಕಾರ್ಯಾಲಯಕ್ಕೆ ಆರೋಪಿತನ ವಿಳಾಸ ಕೋರಿ ಸಲ್ಲಿಸಿದ್ದ ಅರ್ಜಿಯ ಸ್ವೀಕೃತಿಯನ್ನು ನಿ.ಪಿ.**6** ಎಂದು ಗುರುತಿಸಲಾಯಿತು.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿದಾರರ ಹೇಳಿಕೆಯನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ತಿ. ನರಸೀಪುರ.